ನೋಟವನ್ನು ಕೊಟ್ಟರು. ದೀಪಕ ಅಮ್ಮನನ್ನು ಸಮಾಧಾನ ಮಾಡುತ್ತ, ‘ಅಮ್ಮ, ನೀವು ನನಗಾಗಿ ಚಿಂತೆ ಮಾಡುವದು ಬೇಡ. ಅಲ್ಲಿ ಚಿಕ್ಕಮ್ಮ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ’ ಎಂದ. ‘ನಾನೇನು ಚಿಂತೆ ಮಾಡುತ್ತೇನೆ ಮಗು, ಚಿಂತೆ ಮಾಡುವವನು ಮೇಲಿದ್ದಾನೆ’ ಎಂದು ಆ ಚಿಂತಾ ಪರಿಹಾರಕನಿಗೆ ಕೈ ಮುಗಿದರು.

ಒಂದು ಮಾತಂತೂ ನಿಜ. ಕಳೆದ ಒಂದು ವರ್ಷದಿಂದ ಅವನು ದೀಪಕನ ಮೇಲೆ ನಿಜವಾಗಿ ಕರುಣೆ ತೋರಿಸುತ್ತಿದ್ದಾನೆ. ಡಿಪ್ಲೋಮಾ ಕೋರ್ಸಿಗೆ ಅಡ್ಮಿಷನ್ ಸಿಗಬಹುದೆಂದು ಅವನು ಯೋಚಿಸಿಯೇ ಇರಲಿಲ್ಲ. ಹೆದರುತ್ತಲೇ ಪಿ.ಇ.ಟಿ. ಪರೀಕ್ಷೆ ಕಟ್ಟಿದ. ಅದರಲ್ಲಿ ಪಾಸಾದ ಸಂತೋಷ ಅತ್ತಿಗೆಯ ಮಾತು ನಿರಾಶೆಗೊಳಿಸಿತು. ‘ನೀನು ಮುಂದೆ ಓದುವುದಾದರೆ ಇಲ್ಲಿಯೇ ಇದ್ದು ಕೊಂಡು ಓದು, ಬೇರೆ ಕಡೆಗೆ ಇಟ್ಟು ಓದಿಸುವ ಸಾಮರ್ಥ್ಯ ನಮಗಿಲ್ಲ’ ಎಂದು ಸ್ಪಷ್ಟವಾಗಿ ಹೇಳಿದ್ದರು.

ಅವನ ಅದೃಷ್ಟವೆನ್ನುವಂತೆ ಅದೇ ಸಮಯಕ್ಕೆ ಅವನ ತಾತ (ಅಮ್ಮನ ತಂದೆ) ತಮ್ಮ ಆಸ್ತಿಯನ್ನು ಎಲ್ಲ ಮಕ್ಕಳಿಗೂ ಹಂಚಿಕೊಟ್ಟರು. ಅವನ ಅಮ್ಮ ಪಾಲಿಗೂ ಸ್ವಲ್ಪ ಜಮೀನು ಬಂತು. ‘ನಾನು ಜಮೀನು

